(ಆ) ಇಲ್ಲ.

(ಇ) ಅನ್ವಯಿಸುವುದಿಲ್ಲ.

(ಈ) ಅರ್ಜಿಯೊಂದಿಗೆ ಅಂದಾಜು ವೆಚ್ಚವನ್ನು ಸಲ್ಲಿಸುವ ರೋಗಿಯು ಅಂದಾಜು ವೆಚ್ಚದ ಮೊತ್ತವು ಹೆಚ್ಚಾಗಿರುವುದಾಗಿ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಂಭವವು ಹೆಚ್ಚಾಗಿರುವುದರಿಂದ ಹಾಗೂ ಮೊದಲಿಗೆ ಅಂದಾಜುವೆಚ್ಚವನ್ನು ಪಡೆದ ಆಸ್ಪತ್ರೆಗೆ ಕಾರಣಾಂತರದಿಂದ ಹೋಗದಿರುವ ಪ್ರಕರಣಗಳು ಹೆಚ್ಚಾದ್ದರಿಂದ ಆಸ್ಪತ್ರೆಗೆ ಭರವಸೆ ಪತ್ರವನ್ನು ನೀಡಿ ಚಿಕಿತ್ಸೆ ಪಡೆದ ನಂತರ ಧನಾದೇಶವನ್ನು ನೀಡಲಾಗುತ್ತಿರುತ್ತದೆ.

ದೇಶಿ ತಳಿಗಳ ಉತ್ಕೃಷ್ಟ ದರ್ಜೆಯ ಹೈನುಗಾರಿಕೆ

1104(2039) ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ.(ರಾಯಭಾಗ):– ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ) ಭಾರತೀಯ ಸಂಸ್ಕೃತಿಯಲ್ಲಿ ದೇಶಿ ತಳಿಗಳು ಉತ್ಕೃಷ್ಟ ದರ್ಜೆಯ ಹೈನು ಉತ್ಪಾದನಾ ತಳಿಗಳಾಗಿದ್ದು, ಇವುಗಳಿಗೆ ಪ್ರೋತ್ಸಾಹ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ತಳಿಗಳಾದ ಗೀರ್, ಅಮೃತಮಹಲ್ ಮುಂತಾದ ತಳಿಗಳನ್ನು ಸಾಕುತ್ತಿರುವ ರೈತರಿಗೆ ಸರ್ಕಾರದಿಂದ ಯಾವ ರೀತಿಯ ಸಹಕಾರ ನೀಡಲಾಗಿದೆ;

ಇ) ಈ ತಳಿಗಳನ್ನು ಅವಲಂಬಿಸಿ ನಷ್ಟ ಹೊಂದಿರುವ ರೈತರ ಸಹಾಯಕ್ಕೆ ಸರ್ಕಾರ ಸ್ಪಂದಿಸುವುದೇ? (ವಿವರ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ, (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):–

ಅ) ಭಾರತ ದೇಶದಲ್ಲಿ ಒಟ್ಟು 37 ಗುರುತಿಸಲ್ಪಟ್ಟ ದೇಶಿ ತಳಿಗಳಿದ್ದು ಅವುಗಳಲ್ಲಿ, ಸಾಹಿವಾಲ್, ಗಿರ್, ಕಾಂಕ್ರೇಜ್, ರಾಠಿ, ಥಾರ್ಪಾರ್ಕರ್, ಹರಿಯಾಣ, ರೆಡ್ ಸಿಂಧಿ ಮುಂತಾದವು ದೇಶಿ ಹೈನು ಉತ್ಪಾದನಾ ತಳಿಗಳು ಹಾಗೂ ಈ ತಳಿಗಳು ಆಯಾ ಭೌಗೋಳಿಕ ಪ್ರದೇಶಗಳಲ್ಲಿನ ವಾತಾವರಣಕ್ಕೆ ಹೊಂದಿಕೊಂಡಿರುತ್ತವೆ. ಆಯಾ ರಾಜ್ಯಗಳು, ಜಾನುವಾರು ತಳಿ ಸಂವರ್ಧನೆ ನೀತಿಯಂತೆ ಕ್ರಮವಹಿಸಲಾಗುತ್ತಿದೆ.

ಕರ್ನಾಟಕದಲ್ಲಿ ಗುರುತಿಸಲ್ಪಟ್ಟ ಹೈನು ಉತ್ಪಾದನಾ ದೇಶಿ ತಳಿಗಳಿರುವುದಿಲ್ಲ. ಕರ್ನಾಟಕ ದೇಶಿ ತಳಿಗಳು ಮುಖ್ಯವಾಗಿ ಕೃಷಿ ಯೋಗ್ಯ / ಭಾರ ಎಳೆಯುವ ಸಾಮರ್ಥ್ಯದ ತಳಿಗಳು.

ಅವುಗಳು ಅಮೃತಮಹಲ್, ಹಳ್ಳಿಕಾರ್, ಖಿಲ್ಲಾರ್, ಕೃಷ್ಣವ್ಯಾಲಿ, ದೇವಣಿ ಹಾಗೂ ಮಲೆನಾಡು ಗಿಡ್ಡ ತಳಿಗಳಿದ್ದು, ರಾಜ್ಯದ ತಳಿ ಅಭಿವೃದ್ಧಿಗಾಗಿ ಈ ತಳಿಗಳ ಘನೀಕೃತ ವೀರ್ಯನಳಿಕೆ ಉತ್ಪಾದಿಸಿ ಎಲ್ಲಾ ಪಶುವೈದ್ಯ ಸಂಸ್ಥೆಗಳಲ್ಲಿ ಕೃತಕ ಗರ್ಭಧಾರಣೆ ಮುಖಾಂತರ ತಳಿ ಅಭಿವೃದ್ಧಿಗೆ ಕ್ರಮವಹಿಸಲಾಗಿದೆ.

ಸ್ಥಳೀಯ ರಾಸುಗಳ ಗಂಡು ಕರುಗಳ ಸಾಕಾಣಿಕೆಗಾಗಿ ರೂ. 10.000/–ಗಳ ಪ್ರೋತ್ಸಾಹ ಧನವನ್ನು ಇಲಾಖೆಯಿಂದ ನೀಡಲಾಗುತ್ತಿದ್ದು, ಯೋಜನೆ ಜಾರಿಯಲ್ಲಿದೆ.

ಆ) ಗಿರ್ ತಳಿಯ ಸ್ವಾಭಾವಿಕ ಭೌಗೋಳಿಕ ಪ್ರದೇಶ ಗುಜರಾತ್ ಹಾಗೂ ಸುತ್ತಮುತ್ತಲ ಪ್ರದೇಶಗಳಾಗಿದ್ದು ಆಯಾ ಸ್ಥಳಸದ ವಾತಾವರಣಕ್ಕೆ ಹೊಂದಿಕೊಂಡಿರುವ ತಳಿಯಾಗಿರುತ್ತದೆ. ಅಮೃತಮಹಲ್ ತಳಿಯು ಕೃಷಿ / ಭಾರ ಎಳೆಯುವ ಸಾಮರ್ಥ್ಯಕ್ಕೆ ಸೂಕ್ತ ತಳಿಯಾಗಿದ್ದು, ಹಾಲಿನ ಉತ್ಪಾದನೆ ಕಡಮೆ. ಇಲಾಖಾ ವತಿಯಿಂದ ದೇಶಿಯ ತಳಿ ಗಂಡು ಕರುಗಳ ಸಾಕಾಣಿಕೆಗೆ, ಪ್ರೋತ್ಸಾಹಿಸಲು ರೂ. 10,000 ಗಳನ್ನು ಸಹಾಯಧನ ರೂಪದಲ್ಲಿ ಪಶು ಆಹಾರ ಖರೀದಿಗೆ ವಿತರಿಸಲು ನಿಗದಿಪಡಿಸಲಾಗಿದ್ದು, ಯೋಜನೆ ಅನುಷ್ಠಾನದಲ್ಲಿದೆ.

ಕರ್ನಾಟಕ ರಾಜ್ಯದ ಅಜ್ಜಂಪುರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ಇಲಾಖಾ ಫಾರಂನಲ್ಲಿ ಅಮೃತಮಹಲ್ ತಳಿಯನ್ನು ಸೆಲೆಕ್ಟಿವ್ ಬ್ರೀಡಿಂಗ್ ಕಾರ್ಯಕ್ರಮದ ಮೂಲಕ ಸಂರಕ್ಷಣೆ ಹಾಗೂ ಈ ಫಾರ್ಮನಲ್ಲಿ ಜನಿಸಿದ ಗಂಡು ಕರುಗಳನ್ನು 18 ತಿಂಗಳವರೆಗೆ ವಿಶೇಷವಾಗಿ ಪೋಷಣೆ ಮಾಡಿ ಸ್ಥಳೀಯ ಸುತ್ತಮುತ್ತಲ ಜಿಲ್ಲೆಗಳ ರೈತರಿಗೆ ಸಂತಾನೋತ್ಪತ್ತಿ ಹಾಗೂ ಅಭವೃದ್ಧಿಗೆ ವಿತರಿಸಲಾಗುತ್ತಿದೆ ಹಾಗೂ ಉತ್ಕೃಷ್ಟ ತಳಿ ಗುಣಗಳಿರುವ ಹೋರಿ ಕರುಗಳನ್ನು ವೀರ್ಯ ಉತ್ಪಾದನೆಗಾಗಿ ಇಲಾಖೆಯ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ. ಇದೇ ಕಾರ್ಯಕ್ರಮವನ್ನು ಕುಣಿಕೇನಹಳ್ಳಿ, ತುಮಕೂರು ಜಿಲ್ಲೆಯಲ್ಲಿ ಹಳ್ಳಿಕಾರ್ ತಳಿಗಳನ್ನು ಬಂಕಾಪುರ, ಹಾವೇರಿ ಜಿಲ್ಲೆಯಲ್ಲಿ ಖಿಲ್ಲಾರ್ ತಳಿಗಳನ್ನು ನಿರ್ವಹಣೆ ಮಾಡಿ ಅಭಿವೃದ್ಧಿಪಡಿಸಲಾಗುತ್ತಿದೆ.

ಇ) ರಾಷ್ಟ್ರೀಯ ಜಾನುವಾರು ಮಿಷನ್ ಜಾನುವಾರು ವಿಮೆ 2014–15 ಯೋಜನೆಯಡಿ ಸ್ಥಳೀಯ ತಳಿ ಜಾನುವಾರುಗಳನ್ನು ವಿಮೆಗೆ ಒಳಪಡಿಸಲು ಅವಕಾಶ ಕಲ್ಪಿಸಲಾಗಿದ್ದು, ರೈತರ ದೇಶಿ ತಳಿ ರಾಸುಗಳ ಅಕಾಲಿಕ ಮರಣದಿಂದ ಉಂಟಾಗುವ ನಷ್ಟ ಭರಿಸಲು ಸೂಕ್ತ ಯೋಜನೆಯಾಗಿದ್ದು. ಈ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಮುಜರಾಯಿ ದೇವಸ್ಥಾನಗಳು

1105(2040) **ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ):–** ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–